ಆತ್ಮಹತ್ಯೆ ಮಾಡಿಕೊಂಡಿದ್ದಾನೆ ಎಂದು ಹೇಳಿ ಅವನ ಸಾಲದ ವಿವರ ಹೇಳಿದ್ದಾರೆ. ಅದೇನಾಗಿದೆ ಎಂದರೆ, ಅವರ ಹೆಸರಿನಲ್ಲಿ ಯಾವುದೇ ಜಮೀನಿಲ್ಲ. ಅವರ ಕುಟುಂಬದವರ ಹೆಸರಿನಲ್ಲಿ, ಅವರ ತಾಯಿಯ ಹೆಸರಿನಲ್ಲಿ 8 ಎಕರೆ ಜಮೀನು ಇದೆ. ಅವರ ತಂದೆಯ ಹೆಸರಿನಲ್ಲಿ 2 ಎಕರೆ 12 ಗುಂಟೆ ಜಮೀನಿದೆ. ಹಾಗಾಗಿ, ಮಾಣಿಕ್‌ರಾವ್ ಎನ್ನುವವರಿಗೆ ಒಂದೂವರೆ ಲಕ್ಷ ರೂಪಾಯಿ ಸಾಲ ಇದೆ ಎನ್ನುವ ಒಂದು ಮಾತಿದೆ. ಆದರೆ, ಅದು ಬ್ಯಾಂಕಿನ ಸಾಲವಲ್ಲ. ಅವರು ವೈಯಕ್ತಿಕವಾಗಿ ಯಾವುದೋ ಸಾಲ ಮಾಡಿಕೊಂಡಿದ್ದಾರೆ. ಅವರ ಕುಟುಂಬದವರ ಹೆಸರಿನಲ್ಲಿ ಪ್ರಾಥಮಿಕ ಕೃಷಿ ಬ್ಯಾಂಕಿನಲ್ಲಿ 1 ಲಕ್ಷ ರೂಪಾಯಿ ಸಾಲವಿದೆ. ಆ ಸಾಲ ಬಿಟ್ಟರೆ ನಮಗೆ ಬಂದಿರುವ ಮಾಹಿತಿಯ ಪ್ರಕಾರ, ಇವತ್ತು ಆಗಿರುವುದರಿಂದ ಅಷ್ಟು ಮಾಹಿತಿ ಇದೆ. ಈಗ ಅವರು, ಅವರಿಗೆ ಬೇರೆ ಬೇರೆ ಬ್ಯಾಂಕಿನಲ್ಲೂ ಸಾಲವಿದೆ ಎಂದು ಹೇಳುತ್ತಿದ್ದಾರೆ. ಕೃಷಿ ಕಾರ್ಯಕ್ಕಾಗಿ ಸಾಲ ತೆಗೆದುಕೊಂಡಿರುವ ಒಂದು ಹಿನ್ನೆಲೆ ಇರುವುದರಿಂದ Assistant Commissioner ರವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ಸಭೆ ಸೇರಿ, ಅದಕ್ಕೊಂದು ಪರಿಹಾರ ಕೊಡುವ ಬಗ್ಗೆ ಕ್ರಮ ತೆಗೆದುಕೊಳ್ಳುವುದಕ್ಕಾಗುತ್ತದೆ. ಆ ಒಂದು ಜಿಲ್ಲೆಯಲ್ಲೇನು ಬ್ಯಾಂಕುಗಳಲ್ಲಿ ಸಾಲ ವಸೂಲಾತಿಗೋಸ್ಕರ photo ಗಳನ್ನು ಹಾಕಿದ್ದಾರೆಂದು ಹೇಳಿದ್ದಾರೆ. ಈಗಾಗಲೇ ಸೂಚನೆ ಕೊಟ್ಟಿದ್ದು, ಅದನ್ನೆಲ್ಲ ತೆಗೆಯಬೇಕು. ಆ ತರಹದ್ದು ಯಾವುದೂ ಬಹಿರಂಗವಾಗಿ ರೈತರ ಫೋಟೋ ಹಾಕಿ, ಹರಾಜು ಪ್ರಕ್ರಿಯೆ ಮಾಡುವಂಥದ್ದನ್ನೆಲ್ಲ ಮಾಡಬಾರದು ಎಂದು ಆಗಲೇ ನಾನು ಹಿಂದಿನ ಪ್ರಶ್ನೆ ಸಂದರ್ಭದಲ್ಲಿ ಶೂನ್ಯ ವೇಳೆಯಲ್ಲಿ ಉತ್ತರ ಕೊಡುವಾಗ ತಿಳಿಸಿದ್ದೇನೆ. ಅಲ್ಲಿ ಈ ಮಾಣಿಕ್‌ರಾವ್ ಎನ್ನುವವರು ಯಾರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ, ಅವರ ಹೆಸರಿನಲ್ಲಿ ಯಾವುದೇ ಜಮೀನಿಲ್ಲ. ಆದ್ದರಿಂದ ಇದನ್ನು Assistant Commissioner ಅಧ್ಯಕ್ಷತೆ ಸಮಿತಿ ಪರಿಶೀಲಿಸಿ, ಪರಿಹಾರ ಕೊಡುವ ಬಗ್ಗೆ ಕ್ರಮ ತೆಗೆದುಕೊಳ್ಳುತ್ತದೆ.

6. **ವಿಷಯ:** ಕಲಬುರಗಿ ಹೈಕೋರ್ಟ್‌ಗೆ ಬಳ್ಳಾರಿ ಮತ್ತು ಕೊಪ್ಪಳ ವ್ಯಾಜ್ಯಗಳು ಸೇರಿಸದೇ ಇರುವುದರಿಂದ ಕಲಬುರಗಿ ಹೈಕೋರ್ಟ್‌ಗೆ ವ್ಯಾಜ್ಯಗಳ ಸಂಖ್ಯೆ ಕಡಿಮೆಯಾಗಿರುವ ಬಗ್ಗೆ.

ಶ್ರೀ ಬಿ.ಆರ್. ಪಾಟೀಲ್ (ಆಳಂದ): ಮಾನ್ಯ ಉಪಾಧ್ಯಕ್ಷರೆ, ಸಾರ್, ಸದನದಲ್ಲಿ ಮಂತ್ರಿಯವರು ಇಲ್ಲ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ (ಮಾನ್ಯ ಸಹಕಾರ ಹಾಗೂ ಸಕ್ಕರೆ ಸಚಿವರು): ಮಾನ್ಯ ಉಪಾಧ್ಯಕ್ಷರೆ, ಇದಕ್ಕೆ ಉತ್ತರ ಬಂದಿಲ್ಲ, ಇದಕ್ಕೆ ನಾಳೆ ಉತ್ತರ ಕೊಡಿಸುತ್ತೇನೆ.

ಶ್ರೀ ಬಿ.ಆರ್. ಪಾಟೀಲ್: ಹಾಗಿದ್ದರೆ, ನಾಳೆಯೇ . . .

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್: ನಾಳೆಯೇ ತೆಗೆದುಕೊಳ್ಳಲಿ.

ಶ್ರೀ ಬಿ.ಆರ್. ಪಾಟೀಲ್: ಆಯಿತು, ನಾಳೆ ತೆಗೆದುಕೊಳ್ಳಿ.

ಉಪಾಧ್ಯಕ್ಷರು: ಈಗ ಸದನವನ್ನು ನಾಳೆ ಬೆಳಗ್ಗೆ 10–30 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು ರಾತ್ರಿ 8 ಗಂಟೆ 50 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿ:24–07–2015ರ ಶುಕ್ರವಾರದಂದು ಬೆಳಗ್ಗೆ 10–30 ಗಂಟೆಗೆ ಸೇರಲು ನಿಶ್ಚಯಿಸಿತು)